ಪೊಲೀಸ್ ಅಧೀಕ್ಷಕರವರ ಕಛೇರಿ. ಬೆಂಗಳೂರು ಗ್ರಾಮಾಂತರ ಜಿಲ್ಲೆ.

ದಿನಾಂಕ:20-09-2021

# <u>ಪತ್ರಿಕಾ ಪ್ರಕಟಣೆ</u>

**ನೆಲಮಂಗಲ ಉಪವಿಭಾಗ**

**ಮಾದನಾಯಕನಹಳ್ಳಿ ಪೊಲೀಸ್ ಠಾಣೆ**

## ಅನೈತಿಕ ಸಂಬಂಧಕ್ಕಾಗಿ ಪ್ರಿಯಕರನ ಕೊಲೆ ಮಾಡಿದ ಆರೋಪಿಗಳ ಬಂಧನ

ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಿನಾಂಕ:05/09/2021 ರಂದು ಬೆಳಗ್ಗೆ 7.45 ಗಂಟೆ ಸಮಯದಲ್ಲಿ ಮಾದಾವರ ನವಿಲೇ ಲೇಔಟ್ ನಿರ್ಜನ ಪ್ರದೇಶದಲ್ಲಿ ಕಿರಣ್ ಕುಮಾರ್ ಎಂಬುವರಿಗೆ ಅಪರಿಚಿತ ವ್ಯಕ್ತಿಗಳು ಚಾಕುವಿನಿಂದ ಎದೆಗೆ, ಕುತ್ತಿಗೆ ಮತ್ತು ಇತರೆ ಕಡೆ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಈ ಬಗ್ಗೆ ಕಲಂ.307 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತೆ. ಈ ಪ್ರಕರಣದಲ್ಲಿ ಗಾಯಾಳುವಾದ ಕಿರಣ್ ಕುಮಾರ್ ರವರು ೩ನೇ ಮೈಲ ಪ್ರಕ್ರಿಯಾ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವಾಗ ಗುಣವಾಗದೆ ದಿನಾಂಕ:06/09/2021 ರಂದು ಸಂಜೆ 6.15 ಗಂಟೆ ಸಮಯದಲ್ಲಿ ಗಾಯಾಳು ಕಿರಣ್ ಕುಮಾರ್ ಮೃತಪಟ್ಟಿದ್ದರಿಂದ ಕಲಂ.307 ಐಪಿಸಿ ಬದಲು ಕಲಂ.302 ಐಪಿಸಿ ಅಡಿಯಲ್ಲಿ ಕೊಲೆ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಆರೋಪಿಗಳ ಪತ್ತೆಗೆ ಬೆಂಗಳೂರು ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕರವರಾದ ಶ್ರೀ.ಲಕ್ಷ್ಮಿಗಣೇಶ್.ಕೆ. ಕೆ.ಎಸ್.ಪಿ.ಎಸ್ ಮತ್ತು ನೆಲಮಂಗಲ ಉಪವಿಭಾಗದ ಡಿವೈಎಸ್‌ಪಿ ಶ್ರೀ.ಜಗದೀಶ್.ಹೆಚ್.ಸಿ. ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ.ಮಂಜುನಾಥ್.ಬಿ.ಎಸ್ ರವರ ನೇತೃತ್ವದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರ ವಿಶೇಷ ತಂಡವನ್ನು ನೇಮಿಸಿದ್ದು, ಅದರಂತೆ ಸದರಿ ತಂಡವು ವಿವಿದ ಕಡೆಗಳಿಗೆ ಭೇಟಿ ನೀಡಿ ಸಿಸಿ ಕ್ಯಾಮರ ದೃಶ್ಯಾವಳಿಗಳನ್ನು ಪರಿಶೀಲಿಸಿ ಸಿಕ್ಕಿದ ಖಚಿತ ಮಾಹಿತಿಯ ಮೇರೆಗೆ ಆರೋಪಿಗಳು ಕೃತ್ಯಕ್ಕೆ ಬಳಸಿದ ನೀಲಿ ಬಣ್ಣದ ನಂ.ಕೆಎ-01-ಹೆಚ್.ಆರ್-9710 ದ್ವಿಚಕ್ರ ವಾಹನವನ್ನು ಪತ್ತೆ ಮಾಡಿ ಬಳಿಕ ಸದರಿ ವಾಹನ 4ನೇ ಆರೋಪಿ ಶ್ವೇತಾ ವಾಸಿಸುವ ಸ್ಥಳದ ಬಳಿ ಓಡಾಟ ನಡೆಸಿರುವ ಮಾಹಿತಿ ಕಲೆ ಹಾಕಿ ಶ್ವೇತಾಳನ್ನು ವಿಚಾರ ಮಾಡಿ ಸದರಿಯವರು ನೀಡಿದ ಮಾಹಿತಿಯ ಮೇರೆಗೆ ಆರೋಪಿಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆದಿದ್ದು, ಸದರಿ ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಮೇಲ್ಕಂಡ ದ್ವಿಚಕ್ರ ವಾಹನ, ಕೃತ್ಯಕ್ಕೆ ಬಳಸಿದ ಆಯುಧ, ಡಾಂಗಲ್ ಮತ್ತು ಮೊಬೈಲ್ ಫೋನುಗಳನ್ನು ಆರೋಪಿಗಳ ಕಡೆಯಿಂದ ಅಮಾನತ್ತು ಪಡಿಸಿಕೊಂಡು ತನಿಖೆ ಕೈಗೊಂಡಿರುತ್ತೆ.

ಮೇಲ್ಕಂಡ ಪ್ರಕರಣದಲ್ಲಿ ದಸ್ತಗಿರಿ ಮಾಡಿರುವ ಆರೋಪಿಗಳಲ್ಲಿ ಡೆವಿಡ್ ಬಿನ್ ಚಿನ್ನಯ್ಯ ಈತ ದಿನಾಂಕ:23/09/2019 ರಂದು ಸೂರ್ಯ ಸಿಟಿ ಪೊಲೀಸ್ ಠಾಣೆಯಲ್ಲಿ ವರದಿಯಾದ ಮೊ.ನಂ.326/2019 ಕಲಂ.332, 353, 307 ಐಪಿಸಿ ಜೊತೆಗೆ 20(ಸಿ) ಎನ್.ಡಿ.ಪಿ.ಎಸ್ ಆಕ್ಟ್ ಪ್ರಕರಣದಲ್ಲಿ 800 ಕೆಜಿ ಗಾಂಜಾ ಕೇಸಿನಲ್ಲಿ ದಸ್ತಗಿರಿಯಾಗಿ ನ್ಯಾಯಾಂಗ ಬಂಧನದಿಂದ ಕೆಲವು ತಿಂಗಳ ಹಿಂದೆ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದು 4ನೇ ಆರೋಪಿ ಶ್ವೇತಾ ರವರ ಜೊತೆ ಅನೈತಿಕ ಸಂಬಂಧ ಇರಿಸಿಕೊಂಡು, ಈ ಸಂಬಂಧಕ್ಕೆ ಅಡ್ಡಿಯಾಗಿದ್ದ ಅಂದರೆ ಆರೋಪಿ ಶ್ವೇತಾಳೊಂದಿಗೆ ಸುಮಾರು 5 ವರ್ಷಗಳಿಂದ ಅನೈತಿಕ ಸಂಬಂಧ ಹೊಂದಿದ್ದ ಕಿರಣ್ ಕುಮಾರ್ ನನ್ನು ಕೊಲೆ ಮಾಡಿಸಲು ಈ ಇಬ್ಬರು ಆರೋಪಿಗಳು ಮಾತನಾಡಿಕೊಂಡು ಈ ಕೊಲೆಗೆ ಯಾರಿಗೂ ಸುಳಿವು ಸಿಗಬಾರದೆಂದು 1ನೇ ಆರೋಪಿ ಡೇವಿಡ್ ಮೇಲ್ಕಂಡ ಗಾಂಜಾ ಕೇಸಿನಲ್ಲಿ ಜೈಲಿನಲ್ಲಿರುವಾಗ ಅದೇ ಜೈಲಿನಲ್ಲಿದ್ದ ತಮಿಳ್ ಪ್ರಭು ಎಂಬ ಆಸಾಮಿಯನ್ನು ಭೇಟಿಯಾಗಿ ಆತ ನೀಡಿದ ಐಡಿಯಾದಂತೆ ಡೇವಿಡ್ ಮತ್ತು ಆತನ ಪ್ರೇಯಸಿಯಾದ ಶ್ವೇತಾ ರವರುಗಳು 2ನೇ ಆರೋಪಿ ಶ್ರೀಕಾಂತ್ @ ಮೈಕಲ್ ಮತ್ತು 3ನೇ ಆರೋಪಿ ದಿನೇಶ್.ಎಸ್ ರವರಿಗೆ 1 ಲಕ್ಷ ರೂಗಳಿಗೆ ಮಾತನಾಡಿ ಮುಂಗಡವಾಗಿ 10,000/- ರೂ ಗಳನ್ನು ನೀಡಿ ಸದರಿ ಆರೋಪಿಗಳಿಗೆ, ಆರೋಪಿ ಡೇವಿಡ್ ತನ್ನ ಬಳಿ ಇದ್ದ ನೀಲಿ ಬಣ್ಣದ ನಂ.ಕೆಎ-01-ಹೆಚ್.ಆರ್-9710 ದ್ವಿಚಕ್ರ ವಾಹನ, ಚಾಕುವನ್ನು ನೀಡಿ ಶ್ವೇತಾಳ ಮುಖಾಂತರ ಮೃತ ಕಿರಣ್ ನ ಚಲನವಲನಗಳ ಮಾಹಿತಿ ಪಡೆದು ಯಾರಿಗೂ ಈ ಕೊಲೆಯ ಸುಳಿವು ಸಿಗಬಾರದೆಂದು ಮೊಬೈಲ್ ಫೋನ್ ನಲ್ಲಿರುವ ಸಿಮ್ ಗಳನ್ನು ತೆಗೆದು ಡಾಂಗಲ್ ಮೂಲಕ ವಾಟ್ಸ್ ಆಪ್ ನಲ್ಲಿ ಸಂಭಾಷಣೆ ನಡೆಸಿ ಕಿರಣ್ ಕುಮಾರ್ ನನ್ನು ಕೊಲೆ ಮಾಡಿಸಿರುತ್ತಾರೆ.

ಪುತಿನೋ

ಸದರಿ ಕಾರ್ಯಾಚರಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ.ಲಕ್ಷ್ಮೀಗಣೇಶ್.ಕೆ. ಕೆ.ಎಸ್.ಪಿ.ಎಸ್ ಹಾಗೂ ನೆಲಮಂಗಲ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ.ಜಗದೀಶ್.ಹೆಚ್.ಸಿ. ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ.ಮಂಜುನಾಥ.ಬಿ.ಎಸ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ.ದಾಳೇಗೌಡ ಮತ್ತು ಸಿಬ್ಬಂದಿಯವರಾದ ನಾರಾಯಣಸ್ವಾಮಿ ಹೆಚ್.ಸಿ-259, ಮಲ್ಲಗೊಂಡಿ ಹೆಚ್.ಸಿ-329, ರಾಜಶೇಖರ್ ಹೆಚ್.ಸಿ-510, ಪರ್ವೀಜ್ ಪಾಷ ಪಿ.ಸಿ-1497, ರವಿಕುಮಾರ್.ಹೆಚ್ ಪಿ.ಸಿ-1316, ಇನಾಮದಾರ್ ಹಾಜಿಮಲಂಗ್ ಪಿ.ಸಿ-124 ತಾಂತ್ರಿಕ ಸಿಬ್ಬಂದಿಯವರಾದ ಹೆಡ್ ಕಾನ್ಸ್ ಟೇಬಲ್ ಗಳಾದ ಉಮೇಶ್, ಶ್ರೀನಿವಾಸ್, ಮತ್ತು ಪೊಲೀಸ್ ಕಾನ್ಸ್ ಟೇಬಲ್ ಆನಂದ್ ರವರನ್ನು ಒಳಗೊಂಡ ತಂಡ ಆರೋಪಿಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ಸದರಿ ಕಾರ್ಯಾಚರಣೆಯನ್ನು ಮಾನ್ಯ ಹಿರಿಯ ಪೊಲೀಸ್ ಅಧಿಕಾರಿಗಳು ಶ್ಲಾಘಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರು
ಬೆಂಗಳೂರು ಜಿಲ್ಲೆ

**ಪೊಲೀಸ್ ಅಧೀಕ್ಷಕರವರ ಕಛೇರಿ. ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ದಿನಾಂಕ:20-09-2021**

# ಪತ್ರಿಕಾ ಪ್ರಕಟಣೆ

**ನೆಲಮಂಗಲ ಉಪವಿಭಾಗ**

## ಮಾದನಾಯಕನಹಳ್ಳಿ ಪೊಲೀಸ್ ಠಾಣೆ

## ಅನೈತಿಕ ಸಂಬಂಧಕ್ಕಾಗಿ ಪ್ರಿಯಕರನ ಕೊಲೆ ಮಾಡಿದ ಆರೋಪಿಗಳ ಬಂಧನ

ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಿನಾಂಕ:05/09/2021 ರಂದು ಬೆಳಗ್ಗೆ 7.45 ಗಂಟೆ ಸಮಯದಲ್ಲಿ ಮಾದಾವರ ನವಿಲೇ ಲೇಔಟ್ ನಿರ್ಜನ ಪ್ರದೇಶದಲ್ಲಿ ಕಿರಣ್ ಕುಮಾರ್ ಎಂಬುವರಿಗೆ ಅಪರಿಚಿತ ವ್ಯಕ್ತಿಗಳು ಚಾಕುವಿನಿಂದ ಎದೆಗೆ, ಕುತ್ತಿಗೆ ಮತ್ತು ಇತರೆ ಕಡೆ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಈ ಬಗ್ಗೆ ಕಲಂ.307 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತೆ. ಈ ಪ್ರಕರಣದಲ್ಲಿ ಗಾಯಾಳುವಾದ ಕಿರಣ್ ಕುಮಾರ್ ರವರು 8ನೇ ಮೈಲಿ ಪ್ರಕ್ರಿಯಾ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವಾಗ ಗುಣವಾಗದೆ ದಿನಾಂಕ:06/09/2021 ರಂದು ಸಂಜೆ 6.15 ಗಂಟೆ ಸಮಯದಲ್ಲಿ ಗಾಯಾಳು ಕಿರಣ್ ಕುಮಾರ್ ಮೃತಪಟ್ಟಿದ್ದರಿಂದ ಕಲಂ.307 ಐಪಿಸಿ ಬದಲು ಕಲಂ.302 ಐಪಿಸಿ ಅಡಿಯಲ್ಲಿ ಕೊಲೆ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಆರೋಪಿಗಳ ಪತ್ತೆಗೆ ಬೆಂಗಳೂರು ಜಿಲ್ಲಾ ಅಪರ ಪೊಲೀಸ್ ಅಧೀಕ್ಷಕರವರಾದ ಶ್ರೀ.ಲಕ್ಷ್ಮಿಗಣೇಶ್.ಕೆ. ಕೆ.ಎಸ್.ಪಿ.ಎಸ್ ಮತ್ತು ನೆಲಮಂಗಲ ಉಪವಿಭಾಗದ ಡಿವೈಎಸ್ಪಿ ಶ್ರೀ.ಜಗದೀಶ್.ಹೆಚ್.ಸಿ. ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ.ಮಂಜುನಾಥ್.ಬಿ.ಎಸ್ ರವರ ನೇತೃತ್ವದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರ ವಿಶೇಷ ತಂಡವನ್ನು ನೇಮಿಸಿದ್ದು, ಅದರಂತೆ ಸದರಿ ತಂಡವು ವಿವಿದ ಕಡೆಗಳಿಗೆ ಭೇಟಿ ನೀಡಿ ಸಿಸಿ ಕ್ಯಾಮರ ದೃಶ್ಯಾವಳಿಗಳನ್ನು ಪರಿಶೀಲಿಸಿ ಸಿಕ್ಕಿದ ಖಚಿತ ಮಾಹಿತಿಯ ಮೇರೆಗೆ ಆರೋಪಿಗಳು ಕೃತ್ಯಕ್ಕೆ ಬಳಸಿದ ನೀಲಿ ಬಣ್ಣದ ನಂ.ಕೆಎ-01-ಹೆಚ್.ಆರ್-9710 ದ್ವಿಚಕ್ರ ವಾಹನವನ್ನು ಪತ್ತೆ ಮಾಡಿ ಬಳಿಕ ಸದರಿ ವಾಹನ 4ನೇ ಆರೋಪಿ ಶ್ವೇತಾ ವಾಸಿಸುವ ಸ್ಥಳದ ಬಳಿ ಓಡಾಟ ನಡೆಸಿರುವ ಮಾಹಿತಿ ಕಲೆ ಹಾಕಿ ಶ್ವೇತಾಳನ್ನು ವಿಚಾರ ಮಾಡಿ ಸದರಿಯವರು ನೀಡಿದ ಮಾಹಿತಿಯ ಮೇರೆಗೆ ಆರೋಪಿಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆದಿದ್ದು, ಸದರಿ ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಮೇಲ್ಕಂಡ ದ್ವಿಚಕ್ರ ವಾಹನ, ಕೃತ್ಯಕ್ಕೆ ಬಳಸಿದ ಆಯುಧ, ಡಾಂಗಲ್ ಮತ್ತು ಮೊಬೈಲ್ ಫೋನುಗಳನ್ನು ಆರೋಪಿಗಳ ಕಡೆಯಿಂದ ಅಮಾನತ್ತು ಪಡಿಸಿಕೊಂಡು ತನಿಖೆ ಕೈಗೊಂಡಿರುತ್ತೆ.

**-:ದಸ್ತಗಿರಿ ಮಾಡಿರುವ ಆರೋಪಿಗಳ ವಿವರ;-**

1. ಡೇವಿಡ್ ಬಿನ್ ಚಿನ್ನಯ್ಯ, 31 ವರ್ಷ, ಪರಿಶಿಷ್ಟ ಜಾತಿ(ಕ್ರಿಶ್ಚಿಯನ್), ರಿಯಲ್ ಎಸ್ಟೇಟ್ ವ್ಯವಹಾರ ಮತ್ತು ಕಾರು ಚಾಲಕ, ವಾಸ: ಲಕ್ಷ್ಮೀಪುರ, ಹಾಲೋ ಬ್ರಿಕ್ಸ್ ಫ್ಯಾಕ್ಟರಿ ಪಕ್ಕ, ಅಬ್ಬಿಗೆರೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು-57 ಸ್ವಂತ ಊರು-ಗೋಪವರಂ ಗ್ರಾಮ ಮತ್ತು ಮಂಡಲ, ಬದ್ವೇಲು ತಾಲ್ಲೂಕ್, ಕಡಪ ಜಿಲ್ಲೆ, ಆಂದ್ರಪ್ರದೇಶ ರಾಜ್ಯ.

2. ಶ್ರೀಕಾಂತ್.ಎಂ @ ಮೈಕಲ್ ಬಿನ್ ಮುನಿರಾಜು, 28 ವರ್ಷ, ಪರಿಶಿಷ್ಟ ಜಾತಿ, ಅಲ್ಯೂಮಿನಿಯಂ ಫ್ಯಾಬ್ರಿಕೇಷನ್ ಕೆಲಸ, ವಾಸ: ವಿವೇಕಾನಂದನಗರ, 2ನೇ ಕ್ರಾಸ್, ಜಾಲಹಳ್ಳಿ ಕ್ರಾಸ್, ಬೆಂಗಳೂರು-57

3. ದಿನೇಶ್.ಎಸ್ ಬಿನ್ ಸುಬ್ರಮಣಿ, 28 ವರ್ಷ, ಪಡೆಯಾಚಿ ಗೌಂಡರ್ ಜನಾಂಗ, ಪಾರ್ಸನ್ ಇಂಜಿನಿಯರಿಂಗ್ ಕಂಪನಿಯಲ್ಲಿ ಫೋರ್ಜಿಂಗ್ ಕೆಲಸ, ವಾಸ: ಕೆ/ಆಫ್ ಮುನಿರಾಜಪ್ಪ ಬಿಲ್ಡಿಂಗ್, ಚೊಕ್ಕಸಂದ್ರ, 12 ನೇ ಕ್ರಾಸ್, ಟಿ.ದಾಸರಹಳ್ಳಿ, ಬೆಂಗಳೂರು-57,

4. ಶ್ರೀಮತಿ ಶ್ವೇತಾ ಕೋಂ ಲೇಟ್ ಸಿದ್ದರಾಜು, 35 ವರ್ಷ, ಭೋವಿ ಜನಾಂಗ, ಶುದ್ದನೀರು ಘಟಕ ಮತ್ತು ಅಂಗನವಾಡಿಯಲ್ಲಿ ಆಯಾ ಕೆಲಸ, ವಾಸ: ನಾಗಮ್ಮ ಬಡಾವಣೆ, ಶೋಭಾ ಸ್ಟೋರ್ ಹತ್ತಿರ, ಚೊಕ್ಕಸಂದ್ರ, ಟಿ.ದಾಸರಹಳ್ಳಿ, ಬೆಂಗಳೂರು-57.

## ದಸ್ತಗಿರಿ ಮಾಡಿದ ಆರೋಪಿಗಳು

| | | | |
|---|---|---|---|
|  |  |  |  |
| ಡೇವಿಡ್ | ಶ್ರೀಕಾಂತ್ @ ಮೈಕಲ್ | ದಿನೇಶ್.ಎಸ್ | ಶ್ರೀಮತಿ ಶ್ವೇತಾ |

ಮೇಲ್ಕಂಡ ಆರೋಪಿಗಳಲ್ಲಿ ಡೆವಿಡ್ ಬಿನ್ ಚಿನ್ನಯ್ಯ ಈತ ದಿನಾಂಕ:23/09/2019 ರಂದು ಸೂರ್ಯ ಸಿಟಿ ಪೊಲೀಸ್ ಠಾಣೆಯಲ್ಲಿ ವರದಿಯಾದ ಮೊ.ನಂ.326/2019 ಕಲಂ.332, 353, 307 ಐಪಿಸಿ ಜೊತೆಗೆ 20(ಸಿ) ಎನ್.ಡಿ.ಪಿ.ಎಸ್ ಆಕ್ಟ್ ಪ್ರಕರಣದಲ್ಲಿ 800 ಕೆಜಿ ಗಾಂಜಾ ಕೇಸಿನಲ್ಲಿ ದಸ್ತಗಿರಿಯಾಗಿ ನ್ಯಾಯಾಂಗ ಬಂಧನದಿಂದ ಕೆಲವು ತಿಂಗಳ ಹಿಂದೆ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದು 4ನೇ ಆರೋಪಿ ಶ್ವೇತಾ ರವರ ಜೊತೆ ಅನೈತಿಕ ಸಂಬಂಧ ಇರಿಸಿಕೊಂಡು, ಈ ಸಂಬಂಧಕ್ಕೆ ಅಡ್ಡಿಯಾಗಿದ್ದ ಅಂದರೆ ಆರೋಪಿ ಶ್ವೇತಾಳೊಂದಿಗೆ ಸುಮಾರು 5 ವರ್ಷಗಳಿಂದ ಅನೈತಿಕ ಸಂಬಂಧ ಹೊಂದಿದ್ದ ಕಿರಣ್ ಕುಮಾರ್ ನನ್ನು ಕೊಲೆ ಮಾಡಿಸಲು ಈ ಇಬ್ಬರು ಆರೋಪಿಗಳು ಮಾತನಾಡಿಕೊಂಡು ಈ ಕೊಲೆಗೆ ಯಾರಿಗೂ ಸುಳಿವು ಸಿಗಬಾರದೆಂದು 1ನೇ ಆರೋಪಿ ಡೇವಿಡ್ ಮೇಲ್ಕಂಡ ಗಾಂಜಾ ಕೇಸಿನಲ್ಲಿ ಜೈಲಿನಲ್ಲಿರುವಾಗ ಅದೇ ಜೈಲಿನಲ್ಲಿದ್ದ ತಮಿಳ್ ಪ್ರಭು ಎಂಬ ಆಸಾಮಿಯನ್ನು ಬೇಟಿಯಾಗಿ ಆತ ನೀಡಿದ ಐಡಿಯಾದಂತೆ ಡೇವಿಡ್ ಮತ್ತು ಆತನ ಪ್ರೇಯಸಿಯಾದ ಶ್ವೇತಾ ರವರುಗಳು 2ನೇ ಆರೋಪಿ ಶ್ರೀಕಾಂತ್ @ ಮೈಕಲ್ ಮತ್ತು 3ನೇ ಆರೋಪಿ ದಿನೇಶ್.ಎಸ್ ರವರಿಗೆ 1 ಲಕ್ಷ ರೂಗಳಿಗೆ ಮಾತನಾಡಿ ಸದರಿ ಆರೋಪಿಗಳಿಗೆ ಆರೋಪಿ ಡೇವಿಡ್ ತನ್ನ ಬಳಿ ಇದ್ದ ನೀಲಿ ಬಣ್ಣದ ನಂ.ಕೆಎ-01-ಹೆಚ್.ಆರ್-9710 ದ್ವಿಚಕ್ರ ವಾಹನ, ಚಾಕು ಹಾಗೂ ಯಾರಿಗೂ ಈ ಕೊಲೆಯ ಸುಳಿವು ಸಿಗಬಾರದೆಂದು ತಮಿಳ್ ಪ್ರಭು ನೀಡಿದ ಐಡಿಯಾದಂತೆ ಮೊಬೈಲ್ ಫೋನ್ ನಲ್ಲಿರುವ ಸಿಮ್ ಗಳನ್ನು ತೆಗೆದು ಡಾಂಗಲ್ ಮೂಲಕ ವಾಟ್ಸ್ ಆಪ್ ನಲ್ಲಿ ಸಂಭಾಷಣೆ ನಡೆಸಿ ಕಿರಣ್ ಕುಮಾರ್ ನನ್ನು ಕೊಲೆ ಮಾಡಿಸಿರುತ್ತಾರೆ.

**ಸದರಿ ಕಾರ್ಯಾಚರಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ.ಲಕ್ಷ್ಮೀಗಣೇಶ್.ಕೆ. ಕೆ.ಎಸ್.ಪಿ.ಎಸ್ ಹಾಗೂ ನೆಲಮಂಗಲ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ.ಜಗದೀಶ್.ಹೆಚ್.ಸಿ. ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ.ಮಂಜುನಾಥ.ಬಿ.ಎಸ್, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ,ದಾಳೇಗೌಡ ಮತ್ತು ಸಿಬ್ಬಂದಿಯವರಾದ ನಾರಾಯಣಸ್ವಾಮಿ, ಹೆಚ್.ಸಿ:259, ಮಲ್ಲಗೊಂಡಿ ಹೆಚ್.ಸಿ:329, ರಾಜ್ ಶೇಖರ್ ಹೆಚ್.ಸಿ-510, ಪರ್ವೀಜ್ ಪಾಷ ಪಿ,ಸಿ-1497, ರವಿಕುಮಾರ್.ಹೆಚ್, ಪಿಸಿ-1316, ಇನಾಮದಾರ್ ಹಾಜಿಮಲಂಗ ಪಿಸಿ-124 ತಾಂತ್ರಿಕ ಸಿಬ್ಬಂದಿಯವರಾದ ಹೆಡ್ ಕಾನ್ಸ್ ಟೇಬಲ್ ಗಳಾದ ಉಮೇಶ್, ಶ್ರೀನಿವಾಸ್, ಮತ್ತು ಪೊಲೀಸ್ ಕಾನ್ಸ್ ಟೇಬಲ್ ಆನಂದ್ ರವರನ್ನು ಒಳಗೊಂಡ ತಂಡ ಆರೋಪಿಗಳನ್ನು ಪತ್ತೆ ಮಾಡಿ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ಸದರಿ ಕಾರ್ಯಾಚರಣೆಯನ್ನು ಮಾನ್ಯ ಹಿರಿಯ ಪೊಲೀಸ್ ಅಧಿಕಾರಿಗಳು ಶ್ಲಾಘಿಸಿರುತ್ತಾರೆ.**

**ಪೊಲೀಸ್ ಅಧೀಕ್ಷಕರು**
**ಬೆಂಗಳೂರು ಜಿಲ್ಲೆ**